# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 511 (607) |
| ಸದಸ್ಯರ ಹೆಸರು | : | ಶ್ರೀ ಶಾಂತಾರಾಮ್ ಬುಡ್ನ ಸಿದ್ದಿ (ನಾಮನಿರ್ದೇಶನ ಹೊಂದಿದವರು) |
| ಉತ್ತರಿಸಬೇಕಾದ ದಿನಾಂಕ | : | 14.08.2025 |
| ಉತ್ತರಿಸಬೇಕಾದವರು | : | ಸನ್ಮಾನ್ಯ ಮುಖ್ಯ ಮಂತ್ರಿಯವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಗುಂಡ್ಲುಪೇಟೆ ತಾಲ್ಲೂಕಿನ ಪುರಸಭೆ ವ್ಯಾಪ್ತಿಯ ವಾರ್ಡ್ ನಂ: 23ರ ಬಿ.ಜೆ.ಆರ್ ಬಡಾವಣೆಯಲ್ಲಿ ವಾಸವಿರುವ ಬುಡಕಟ್ಟು ಡೊಂಗ್ರಿ ಗರಾಸಿಯ ಕುಟುಂಬಗಳಿಗೆ ನಿವೇಶನ ಮನೆಗಳನ್ನು ಮಾಡಿಕೊಡಲು ಹಾಗೂ ಕುಡಿಯುವ ನೀರು, ರಸ್ತೆ ನಿರ್ಮಾಣ, ಚರಂಡಿ ಇತ್ಯಾದಿ ಸೌಲಭ್ಯಗಳನ್ನು ಕಲ್ಪಿಸುವ ಪ್ರಕ್ರಿಯೆ ಯಾವ ಹಂತದಲ್ಲಿದೆ: (ಸಂಪೂರ್ಣ ಮಾಹಿತಿ ನೀಡುವುದು) | ಚಾಮರಾಜನಗರ ಜಿಲ್ಲೆ ಗುಂಡ್ಲುಪೇಟೆ ತಾಲ್ಲೂಕಿನ ಪುರಸಭೆ ವ್ಯಾಪ್ತಿಯ ವಾರ್ಡ್ ನಂ. 23 ರ ಜಿ.ಜೆ.ಆರ್ ಬಡಾವಣೆ ವ್ಯಾಪ್ತಿಯಲ್ಲಿ ಬರುವ ಖಾಸಗಿ ಜಾಗದಲ್ಲಿ 13 ಡೋಂಗ್ರಿ ಗರಾಸಿಯ ಸಮುದಾಯದ ಕುಟುಂಬಗಳು ವಾಸವಾಗಿರುತ್ತಾರೆ. ತಹಶೀಲ್ದಾರ್, ಗುಂಡ್ಲುಪೇಟೆ ತಾಲ್ಲೂಕು ಇವರಿಗೆ ಸರ್ಕಾರಿ ಜಾಗ ಗುರುತಿಸಿ ನಿವೇಶನಗಳನ್ನು ಮಂಜೂರು ಮಾಡಿಕೊಡುವಂತೆ ದಿನಾಂಕ 27.03.2025 ರಂದು ಜಿಲ್ಲಾ ಮಟ್ಟದ ಅಧಿಕಾರಿಗಳು ಪತ್ರ ಬರೆದಿರುತ್ತಾರೆ. ಸದರಿಯವರಿಗೆ ನಿವೇಶನ ಮಂಜೂರಾದ ಕೂಡಲೇ ಅಗತ್ಯ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲು ಪರಿಶೀಲಿಸಲಾಗುವುದು. |
| ಆ) | ಸರ್ಕಾರವು ಈ ಕುರಿತು ಮುಖ್ಯ ಅಧಿಕಾರಿಗಳು, ಪುರಸಭೆ, ಗುಂಡ್ಲುಪೇಟೆ ಇವರಿಗೆ ದಿನಾಂಕ 18.12.2024 ರಂದು ಪತ್ರ ಬರೆಯಲಾಗಿರುತ್ತದೆ ಎಂದು ಕಳೆದ ಅಧಿವೇಶನದಲ್ಲಿ ಭರವಸೆ ನೀಡಿದ್ದು, ಬುಡಕಟ್ಟು ಡೊಂಗ್ರಿ ಗರಾಸಿಯ ಕುಟುಂಬಗಳ ಸದರಿ ಮೂಲಭೂತ ಸಮಸ್ಯೆಗಳು ನಿವಾರಣೆ ಆಗಿದೆಯೆ; ( ಸಂಪೂರ್ಣ ಮಾಹಿತಿ ನೀಡುವುದು) | ದಿನಾಂಕ 18.12.2024 ರಂದು ಪುರಸಭೆ, ಗುಂಡ್ಲುಪೇಟೆ ಇವರಿಗೆ ಹಾಗೂ ದಿನಾಂಕ 27.03.2025 ರಂದು ತಹಶೀಲ್ದಾರ್, ಗುಂಡ್ಲುಪೇಟೆ ಇವರಿಗೆ ನಿವೇಶನ ಸೌಲಭ್ಯ ಕಲ್ಪಿಸಲು ಪತ್ರ ಬರೆಯಲಾಗಿತ್ತು. ಆದರೆ ಸರ್ಕಾರಿ ಜಮೀನು ದೊರಕದೆ ಇದ್ದುದರಿಂದ ವಿಳಂಬವಾಗಿರುತ್ತದೆ. ಶೀಘ್ರವಾಗಿ ಸರ್ಕಾರಿ ಜಾಗವನ್ನು ಗುರುತಿಸಿ ನಿವೇಶನಗಳನ್ನು ಹಂಚಿಕೆ ಮಾಡಿ ಮೂಲಭೂತ ಸೌಕರ್ಯಗಳಾದ ಕುಡಿಯುವ ನೀರು, ರಸ್ತೆ , ಚರಂಡಿ ಸೌಲಭ್ಯವನ್ನು ಒದಗಿಸಲು ಪರಿಶೀಲಿಸಲಾಗುವುದು. |
| ಇ) | ಆಗದೇ ಇದ್ದಲ್ಲಿ, ಕಾರಣ ಮತ್ತು ಸರ್ಕಾರ ತೆಗದುಕೊಂಡ ಕ್ರಮಗಳಾವುವು? | |

STW/SECB/STC/168/2025

(ಸಿದ್ದರಾಮಯ್ಯ)
ಮುಖ್ಯಮಂತ್ರಿ